2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **102/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಬಿ.ಎಸ್. ಉಮಾ | ಪಿಡಬ್ಲ್ಯೂ - 14 |
| ತಂದೆಯ ಹೆಸರು | - | ಕೆ.ಎಂ. ಪ್ರಕಾಶ್ | ಸಿಡಬ್ಲ್ಯೂ - 21 |
| ವಯಸ್ಸು | - | 54 ವರ್ಷ | |
| ಉದ್ಯೋಗ | - | ಪಿ.ಎಸ್.ಐ, ಹಾಸನ ಗ್ರಾಮಾಂತರ ಠಾಣೆ | |
| ವಾಸ ಸ್ಥಳ | - | ಹಾಸನ | |

ದಿನಾಂಕಃ 09-03-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನಾನು ದಿಃ 14.11.2014 ರಿಂದ ಸೆಪ್ಟಂಬರ್ 2018 ರವರೆಗೆ ಹಾಸನ ಜಿಲ್ಲಾ ಆಸ್ಪತ್ರೆಯಲ್ಲಿ ಮಹಿಳಾ ವಿಶೇಷ ಚಿಕಿತ್ಸಾ ಘಟಕದಲ್ಲಿ ಎ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.
2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 27.07.2016 ರಂದು ಹಾಸನ ಜಿಲ್ಲಾ ಆಸ್ಪತ್ರೆಯಲ್ಲಿ ಮಹಿಳಾ ವಿಶೇಷ ಚಿಕಿತ್ಸಾ ಘಟಕದ ಆಪ್ತ ಸಮಾಲೋಚಕರಾದ ಚಾಸಾ.20 ಶ್ವೇತಾ ಕೆ.ಎಸ್. ರವರು ಮೃತ ಅನಿತಾ ಎಂಬ ಮಹಿಳೆಯು ಅರೇ ಪ್ರಜ್ಞಾವಸ್ಥೆಯಲ್ಲಿ ಇದ್ದು ಹಾಗೂ ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇರುವುದಿಲ್ಲವೆಂದು ಅವರ ತಾಯಿಯಾದ ಚಾಸಾ.1 ವನಜಾಕ್ಷಿ ರವರ ಹೇಳಿಕೆ

ಪಡೆಯುವಂತೆ ಕೋರಿ ಮನವಿ ಪತ್ರ ಸಲ್ಲಿಸಿದ್ದ ಮೇರೆಗೆ ನಾನು ಚಾಸಾ.1 ವನಜಾಕ್ಷಿ ಇವರ ಹೇಳಿಕೆಯನ್ನು ಮಹಿಳಾ ಚಿಕಿತ್ಸಾ ವಿಶೇಷ ಘಟಕದಲ್ಲಿ ದಿಃ 27.02.2016 ರಂದು ಸಂಜೆ 6.15 ರಿಂದ 7.00 ಗಂಟೆ ವರೆಗೆ ಹೇಳಿಕೆಯನ್ನು ದಾಖಲಿಸಿಕೊಂಡು ನಂತರ ಹಾಸನ ಮಹಿಳಾ ಪೊಲೀಸ್ ಠಾಣೆಗೆ ಸದರಿ ಹೇಳಿಕೆಯನ್ನು ನಾನು ನೀಡಿದ್ದು, ಸದರಿ ಹೇಳಿಕೆಯ ಮೇರೆಗೆ ಹಾಸನ ಮಹಿಳಾ ಪೊಲೀಸ್ ಠಾಣೆಯವರು ಪ್ರಕರಣದ ದಾಖಲಿಸಿಕೊಂಡಿರುತ್ತಾರೆ.

3. ಸಾಕ್ಷಿಯು ಚಾಸಾ.1 ವನಜಾಕ್ಷಿ ಇವರ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಶ್ರೀ ಹೆಚ್.ಜೆ.ಆರ್. ವಕೀಲರಿಂದ – 1 ಮತ್ತು 2 ನೇ ಆರೋಪಿತರ ಪರವಾಗಿ</u>

4. ಹಾಸನ ಜಿಲ್ಲಾ ಆಸ್ಪತ್ರೆಯಲ್ಲಿ ಆಪ್ತ ಸಮಾಲೋಚಕ ಘಟಕ ಬೇರೆ ಮತ್ತು ನಾನು ಕರ್ತವ್ಯ ನಿರ್ವಹಿಸುತ್ತಿದ್ದ ಮಹಿಳಾ ವಿಶೇಷ ಚಿಕಿತ್ಸಾ ಘಟಕ ಬೇರೆ ಎಂದರೆ ಸರಿಯಲ್ಲ. ನಾನು ಕರ್ತವ್ಯದಲ್ಲಿ ನಿರ್ವಹಿಸುತ್ತಿದ್ದ ಮಹಿಳಾ ವಿಶೇಷ ಚಿಕಿತ್ಸಾ ಘಟಕದಲ್ಲಿ ಎಂ.ಎಲ್.ಸಿ ಬಂದ ಮೇಲೆ ಅದರ ಕುರಿತಂತೆ ಒಂದು ನಿವೇದನೆಯನ್ನು ಪಡೆದುಕೊಂಡು ಹೇಳಿಕೆ ಮಾಡಿಕೊಳ್ಳಬೇಕು ಎಂದರೆ ಸಾಕ್ಷಿಯು ನಾನು ಕರ್ತವ್ಯ ನಿರ್ವಹಿಸುತ್ತದ್ದ ಮಹಿಳಾ

ವಿಶೇಷ ಚಿಕಿತ್ಸಾ ಘಟಕದಲ್ಲಿ ಯಾವುದೇ ಎಂ.ಎಲ್.ಸಿ ಬರುವುದಿಲ್ಲ, ಆದರೆ ವೈದ್ಯರ ಶಿಫಾರಸ್ಸಿನ ಮೇರೆಗೆ ನೊಂದವರ Counseling ಮಾಡಲಾಗುತ್ತದೆ, ಒಂದು ವೇಳೆ ಪ್ರಕರಣ ದಾಖಲಿಸಬೇಕಾದರೆ ನಾವು ಕೂಡ ಸಂಬಂಧಿಸಿದ ಸಂಬಂಧಿಸಿದ ಠಾಣೆಗೆ ವೈದ್ಯಾಧಿಕಾರಿಗಳ ಮೂಲಕ ವಿಷಯವನ್ನು ತಿಳಿಸುತ್ತೇವೆ. ಮೃತ ಅನಿತಾ ಇವರ ಹೇಳಿಕೆ ದಾಖಲಿಸಿಕೊಳ್ಳಲು ನಮ್ಮ ಘಟಕಕ್ಕೆ ಡಾ. ರಾಜಶೇಖರ್ ಇವರು ಒಂದು ಪತ್ರವನ್ನು ನೀಡಿರುತ್ತಾರೆ. ನಾನು ಡಾ. ರಾಜಶೇಖರ್ ಇವರು ನೀಡಿದ ಪತ್ರವನ್ನು ಪರಿಶೀಲಿಸಿರುತ್ತೇನೆ. ಸದರಿ ಪತ್ರದಲ್ಲಿ ಮೃತ ಅನಿತಾ ಇವರ ಮೇಲೆ ಅವಳ ಗಂಡನಿಂದ ಹಲ್ಲೆಯಾದ ಹಿನ್ನೆಲೆಯ ಬಗ್ಗೆ ತಿಳಿಸಿರುತ್ತಾರೆ. ಸದರಿ ಪತ್ರದಲ್ಲಿ ಯಾವ ದಿನ ಮೃತ ಅನಿತಾ ಇವರಿಗೆ ಹಲ್ಲೆಯಾಯಿತು ಮತ್ತು ಸದರಿ ಮೃತ ಅನಿತಾ ಇವರು ಹಾಸನ ಜಿಲ್ಲಾ ಆಸ್ಪತ್ರೆಗೆ ಬರುವ ಮೊದಲು ಯಾವುದಾದರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರ ಎಂಬುದರ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಡಾ. ರಾಜಶೇಖರ್ ಇವರು ನೀಡಿದ ಪತ್ರದ ಅನುಸಾರ ಮೃತ ಅನಿತಾ ಇವರ ಹೇಳಿಕೆಯನ್ನು ಮಾಡಿಕೊಳ್ಳಲು ತಿಳಿಸಲಾಗಿತ್ತು ಎಂದರೆ ಸರಿ. ಸದರಿ ಪತ್ರದಂತೆ ನಾನು ಆಗಲಿ ಅಥವ ನಮ್ಮ ಮಹಿಳಾ ಘಟಕದ ಬೇರೆಯವರು ಆಗಲಿ ಸದರಿ ಮೃತ ಅನಿತಾ ಇವರ ಹೇಳಿಕೆಯನ್ನು ಮಾಡಿಕೊಂಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಮೃತ ಅನಿತಾ ಇವರು ಪ್ರಜ್ಞಾ ಹೀನ ಸ್ಥಿತಿಯಲ್ಲಿ ಇದ್ದು ಅವರ ಹೇಳಿಕೆಯನ್ನು ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ಮೃತ ಅನಿತಾ ಇವರು

ಪ್ರಜ್ಞಾವಸ್ಥೆ ಇಲ್ಲದೆ ಇದ್ದ ಸ್ಥಿತಿಯಲ್ಲಿ ಇದ್ದು ಅವಳನ್ನು ನಾನು ಆಸ್ಪತ್ರೆಯ ಕೊಟ್ಟಡಿಯಲ್ಲಿ ನೋಡಲು ಹೋದಾಗ ಅವಳು ಇರಲಿಲ್ಲ. ಮೃತ ಅನಿತಾ ಇವರು ಅಪ್ರಜ್ಞಾವಸ್ಥೆಯಲ್ಲಿ ಇದ್ದ ಬಗ್ಗೆ ಸಂಬಂಧಿಸಿದ ವೈದ್ಯರಿಂದ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿಲ್ಲ ಯಾಕೆಂದರೆ ಅದರ ಅವಶ್ಯಕತೆ ಇರಲಿಲ್ಲ.

5. ನಾನು ಮೃತ ಅನಿತಾ ಇವರ ತಾಯಿಯಾದ ವನಜಾಕ್ಷಿ ಇವರ ಹೇಳಿಕೆಯನ್ನು ಮಾಡಿಕೊಂಡಿದ್ದು, ಸದರಿ ಹೇಳಿಕೆಯಲ್ಲಿ ಮೃತ ಅನಿತಾ ಇವರು ಪ್ರಜ್ಞಾವಸ್ಥೆ ಸ್ಥಿತಿಯಲ್ಲಿ ಇರಲಿಲ್ಲ ಎಂಬುದರ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನನಗೆ ಚಾಸಾ.1 ವನಜಾಕ್ಷಿ ಇವರ ಹೇಳಿಕೆ ಮಾಡಿಕೊಳ್ಳಲು ಯಾವುದೇ ಆದೇಶ ಇಲ್ಲದಿದ್ದರು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.1 ದಾಖಲೆಯನ್ನು ಬಿಟ್ಟರೇ ಉಳಿದ ದಾಖಲೆಗಳನ್ನು ನಾನು ಹಾಸನ ಮಹಿಳಾ ಪೊಲೀಸ್ ಠಾಣೆಗೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅದು ನನ್ನ ಕರ್ತವ್ಯವಲ್ಲ ಎಂದು ಹೇಳುತ್ತಾರೆ.

<u>ಮರು ವಿಚಾರಣೆ - ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಮಂಜುನಾಥ ಸಂಗ್ರೇಶಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ